# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 07–02–2017 ರಂದು ಸಂಜೆ 4.00ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಮುಖ್ಯ ಅಭಿಯಂತರರು (ಘ.ತ್ಯಾ.ನಿ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಕಾ.ಪಾ.ಅ. (ಘ.ತ್ಯಾ.ನಿ) |
| 3. | ಎನ್.ಉಮಾ | – ಸದಸ್ಯರು | |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಲೆಕ್ಕ ಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಮುಖ್ಯ ಅಭಿಯಂತರರು (ಘ.ತ್ಯಾ.ನಿ) ರವರನ್ನು ಸಭೆಗೆ ಸ್ವಾಗತ್ತಿಸುತ್ತಾ, ಮುಖ್ಯ ಅಭಿಯಂತರರು (ಘ.ತ್ಯಾ.ನಿ) ವಿಭಾಗಕ್ಕೆ ಸಂಬಂಧಿಸಿದಂತೆ 2006–07ನೇ ಸಾಲಿನಿಂದ 2013–14ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಹಾಗೂ ಸದರಿ ಸಾಲುಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದಾಗ, ಮುಖ್ಯ ಅಭಿಯಂತರರು (ಘ.ತ್ಯಾ.ನಿ) ರವರು ವಲಯ ವ್ಯಾಪ್ತಿಯಲ್ಲಿಯೇ ಅಧೀಕ್ಷಕ ಅಭಿಯಂತರರು ಹಾಗೂ ಜಂಟಿ ಆಯುಕ್ತರರ ಅನುಮೋದನೆಯೊಂದಿಗೆ ವಲಯದ ಸಹಾಯಕ ನಿಯಂತ್ರಕರು – ಹಣಕಾಸು ರವರು ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಬಿಲ್‌ಗಳನ್ನು ಪಾವತಿಸುತ್ತಾರೆಂದು, ಈ ಬಗ್ಗೆ ಲೆಕಪತ್ರಗಳ ನಿರ್ವಹಣೆಯನ್ನು ವಲಯ ವ್ಯಾಪ್ತಿಯ ಕಛೇರಿಯಲ್ಲಿ ನಿರ್ವಹಿಸುವುದಾಗಿ ತಿಳಿಸುತ್ತಾ, ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ವಲಯ ಕಛೇರಿಯವರುಗಳೇ ಸಲ್ಲಿಸಬೇಕಾಗುತ್ತದೆಂದು ತಿಳಿಸಿದರು.

ನಂತರ ಅಧ್ಯಕ್ಷರು ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ವಿಭಾಗ ರವರು ನಿರ್ವಹಿಸುವ ಕರ್ತವ್ಯ ಮತ್ತು ಜವಾಬ್ದಾರಿಗಳ ಮಾಹಿತಿಯನ್ನು ನೀಡಲು ತಿಳಿಸಿದಾಗ, ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರು ಅವರ ಅಧೀನದಲ್ಲಿ ಒಬ್ಬರು ಕಾರ್ಯಪಾಲಕ ಅಭಿಯಂತರರು ಇರುವುದಾಗಿ ತಿಳಿಸುತ್ತಾ, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಂಪೂರ್ಣ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದಾಗಿ, ಘನತ್ಯಾಜ್ಯ ವಿಲೇವಾರಿ ಘಟಕಗಳ ತಪಾಸಣೆ ನಡೆಸುವುದಾಗಿ ಹಾಗೂ ಸರ್ಕಾರವು ನೀಡುವ  ವಿಶೇಷ ಅನುದಾನದಡಿ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಕರೆಯುವುದಾಗಿ, ಹಾಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಸುಮಾರು ರೂ.620.00ಕೋಟಿ ಅನುದಾನವು ಮಂಜೂರಾಗಿದ್ದು, ಈ ನಿಟ್ಟಿನಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯ ನಿರ್ವಹಿಸುವುದಾಗಿ ಮಾಹಿತಿ ನೀಡಿದರು. ಆಗ ಸಮಿತಿಯ ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಮೇಲ್ಕಂಡ ಎಲ್ಲಾ ಮಾಹಿತಿಯ ವಿವರಗಳನ್ನು ಹಾಗೂ ನಗರೋತ್ಥಾನ ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನದಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಸಂಪೂರ್ಣ ಕಾರ್ಯಯೋಜನೆಯ ವಿವರಗಳನ್ನು ಸಮಿತಿಗೆ ಸಲ್ಲಿಸಲು ತಿಳಿಸಿದರು

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಮಾಹಿತಿಗಳನ್ನು ಒಂದು ವಾರದ ಒಳಗೆ ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಚರ್ಚಿಸಬೇಕಾದ ಅಗತ್ಯವಿದ್ದು, ವಲಯ ಅಪರ/ಜಂಟಿ ಆಯುಕ್ತರರುಗಳು, ಅಧೀಕ್ಷಕ ಅಭಿಯಂತರರು ಹಾಗೂ ಅವರ ಅಧೀನ ಅಧಿಕಾರಿಗಳನ್ನೊಳಗೊಂಡಂತೆ ಸಭೆಯನ್ನು ನಿಗಧಿಪಡಿಸುವುದಾಗಿ ತಿಳಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**
**ಲೆಕ್ಕಪತ್ರ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಕಳೂಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ
7.ಕಛೇರಿ ಕಡತಕ್ಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 07-02-2017 ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಅಪರ ನಿರ್ದೇಶಕರು (ನಗರ ಯೋಜನೆ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಉಪ ನಿರ್ದೇಶಕರು (ಉತ್ತರ) |
| 3. | ಎನ್.ಉಮಾ | – ಸದಸ್ಯರು | ಸಹಾಯಕ ನಿರ್ದೇಶಕರು(ಉತ್ತರ &ದಕ್ಷಿಣ) |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಲೆಕ್ಕ ಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸ್ಥಾಯಿ ಸಮಿತಿಯ ಸದಸ್ಯರು, ಅಪರ ನಿರ್ದೇಶಕರು, ನಗರ ಯೋಜನೆ ಹಾಗೂ ನಗರ ಯೋಜನೆ ವಿಭಾಗದ ಅಭಿಯಂತರರುಗಳನ್ನು ಸಭೆಗೆ ಸ್ವಾಗತ್ತಿಸುತ್ತಾ, ನಗರ ಯೋಜನೆ-ಕೇಂದ್ರ ವಿಭಾಗಕ್ಕೆ ಸಂಬಂಧಿಸಿದಂತೆ 2006-07ನೇ ಸಾಲಿನಿಂದ ಇದುವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಚರ್ಚಿಸುವ ಸಲುವಾಗಿ ಬೆಳಿಗ್ಗೆ 11.00ಗಂಟೆಗೆ ಸಭೆಯನ್ನು ನಿಗಧಿಪಡಿಸಿ, ಸಮಿತಿಯು ಸಭೆಯ ತಿಳುವಳಿಕೆ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಜಾರಿ ಮಾಡಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕಳುಹಿಸಲಾಗಿದ್ದರೂ, 12.00ಗಂಟೆಯಾದರೂ ಅಧಿಕಾರಿಗಳು ಸಭೆಗೆ ಹಾಜರಾಗದೆ ಸ್ಥಾಯಿ ಸಮಿತಿಯ ಸಭೆಗೆ ಅಗೌರವ ತೋರಿರುತ್ತಾರೆಂದು ಅಸಮಾಧಾನ ವ್ಯಕ್ತಪಡಿಸಿ, ನಗರ ಯೋಜನೆ-ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ 2006-07ನೇ ಸಾಲಿನಿಂದ 2013-14ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ

ವರದಿಯಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಹಾಗೂ ಸದರಿ ಸಾಲುಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದರು.

ಅದರಂತೆ ಹಾಜರಿದ್ದ ಅಪರ ನಿರ್ದೇಶಕರು ನಗರ ಯೋಜನೆ ರವರು ಸದನ ಸಮಿತಿಯಲ್ಲಿ ಈಗಾಗಲೇ ಈ ವಿಷಯದ ಬಗ್ಗೆ ಚರ್ಚೆ ನಡೆಸಿ, ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿಯನ್ನು ಕೈಬಿಡಲಾಗಿರುತ್ತದೆಂದು ತಿಳಿಸಿದಾಗ, ಅಧ್ಯಕ್ಷರು ಮುಖ್ಯ ಲೆಕ್ಕಪರಿಶೋಧಕರ ಕಛೇರಿ, ಬಿಬಿಎಂಪಿ ಯಿಂದ ಲೆಕ್ಕಪರಿಶೋಧನೆ ಮಾಡಿ ಸಲ್ಲಿಸಿರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ನೀಡಬೇಕೆಂದು ಸೂಚಿಸುತ್ತಾ, ಸಂಬಂಧಪಟ್ಟ ಕಡತಗಳನ್ನು ಕಂಡಿಕೆವಾರು ಉತ್ತರಗಳೊಂದಿಗೆ ಆಡಿಟ್ ಸೆಲ್ ವಿಭಾಗದ ಮುಖಾಂತರ ಸಮಿತಿಗೆ ಮಂಡಿಸಿದ್ದಲ್ಲಿ, ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಇದಕ್ಕೆ ಅಪರ ನಿರ್ದೇಶಕರು ರವರು ಸಭೆಯಲ್ಲಿ ಹಾಜರಿದ್ದ ತಮ್ಮ ಅಧೀನ ಅಧಿಕಾರಿಗಳಿಗೆ ಲೆಕ್ಕ ಪರಿಶೋಧನಾ ವರದಿಗಳ ಆಕ್ಷೇಪಣೆ ಹಾಗೂ ವಸೂಲಾತಿಗೆ ಸಂಬಂಧಿಸಿದಂತೆ ಆಡಿಟ್ ಸೆಲ್ ವಿಭಾಗದವರೊಂದಿಗೆ ಚರ್ಚಿಸಿ ಅನುಸರಣಾ ವರದಿಯನ್ನು ಸಲ್ಲಿಸಲು ಅಗತ್ಯ ಕ್ರಮವನ್ನು ವಹಿಸಲು ಸೂಚಿಸಿದರು.

ನಂತರ ಅಧ್ಯಕ್ಷರು ಮಾತನಾಡುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನಾ ವಿಭಾಗದ ಮುಖ್ಯಸ್ಥರಾದ ಅಪರ ನಿರ್ದೇಶಕರವರನ್ನು ಅವರ ಕಾರ್ಯವ್ಯಾಪ್ತಿಯ ವಿವರಗಳನ್ನು ಸಭೆಗೆ ನೀಡಲು ತಿಳಿಸಿದಾಗ, ಸದರಿಯವರು ಪಾಲಿಕೆಯ ಕೇಂದ್ರ ನಗರ ಯೋಜನಾ ವಿಭಾಗದ ಮುಖ್ಯಸ್ಥರಾಗಿ ಮಾತ್ರ ಕರ್ತವ್ಯವನ್ನು ನಿರ್ವಹಿಸುವುದಾಗಿ ತಿಳಿಸುತ್ತಾ, ವಲಯ ವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು ನಗರ ಯೋಜನೆ ರವರುಗಳು ವಲಯ ಅಪರ/ಜಂಟಿ ಆಯುಕ್ತರರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆಂದು ತಿಳಿಸಿದರು. ಆಗ ಅಧ್ಯಕ್ಷರು ನಗರ ಯೋಜನೆ ವಿಭಾಗದ ಅಧಿಕಾರಿಗಳ ಅಧಿಕಾರ ಪ್ರತ್ಯಾಯೋಜನೆಯ ಪ್ರತಿಯನ್ನು ಸಮಿತಿಗೆ ಸಲ್ಲಿಸಲು ಹಾಗೂ ಕೇಂದ್ರ ನಗರ ಯೋಜನೆ ವಿಭಾಗದಿಂದ ಪ್ರಸಕ್ತ ಸಾಲಿನಲ್ಲಿ ತಹಲ್‌ವರೆವಿಗೂ ಒಟ್ಟು ಎಷ್ಟು ಕಟ್ಟಡಗಳಿಗೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ, ಇದಕ್ಕೆ ಸಂಬಂಧಿಸಿದಂತೆ ವಸೂಲಾಗಿರುವ ಶುಲ್ಕದ ವಿವರಗಳುಳ್ಳ ಸಂಪೂರ್ಣ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ತಿಳಿಸಿದರು.

ನಂತರ ಅಧ್ಯಕ್ಷರು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣ ಮಾಡಿರುವ ಕಟ್ಟಡಗಳ ವಿರುದ್ಧ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದರ ವಿವರ ಕೇಳಿದಾಗ, ಅಪರ ನಿರ್ದೇಶಕರವರು 3 ಹಂತಗಳಲ್ಲಿ ನಿರ್ಮಾಣ ಹಂತದಲ್ಲಿನ ಕಟ್ಟಡವನ್ನು ತಪಾಸಣೆ ಮಾಡುವುದಾಗಿ ತಿಳಿಸುತ್ತಾ, ನಕ್ಷೆ ಉಲ್ಲಂಘನೆ ಇದ್ದಲ್ಲಿ ಸ್ವಾಧೀನಾನುಭವ ಮತ್ತು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವುದಿಲ್ಲವೆಂದು, ಉಳಿದಂತೆ ವಾರ್ಡ್‌ನ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಿ.ಓ ಮತ್ತು ಸಿ.ಓ ನೀಡುವ ಮೂಲಕ ಕ್ರಮ ಕೈಗೊಳ್ಳುತ್ತಾರೆಂದು ತಿಳಿಸಿದರು.

ಮುಂದುವರಿದು ಕೆರೆ ಮತ್ತು ರಾಜಕಾಲುವೆ ಸುತ್ತಮುತ್ತ ಕಟ್ಟಡ ನಿರ್ಮಾಣ ಮಾಡಲು ನಕ್ಷೆ ಮಂಜೂರಾತಿಯನ್ನು ಯಾವ ಆಧಾರದ ಮೇಲೆ ನೀಡಲಾಗುತ್ತದೆ ಈ ಬಗ್ಗೆ ಮಾಹಿತಿಯನ್ನು ನೀಡಲು ತಿಳಿಸಲಾಗಿ, ಕೆರೆ ಮತ್ತು ರಾಜಕಾಲುವೆ ಸುತ್ತಮುತ್ತ ಕಟ್ಟಡ ನಿರ್ಮಾಣ ಮಾಡಲು ನಕ್ಷೆ ಮಂಜೂರಾತಿ ನೀಡಲು ಮೊದಲಿಗೆ ಸಂಬಂಧಪಟ್ಟ ಇಲಾಖೆಗಳಿಂದ ಅಭಿಪ್ರಾಯವನ್ನು ಪಡೆದು ಸ್ಥಳೀಯ ವಿಲೇಜ್ ಮ್ಯಾಪ್, ಸರ್ವೇ ಸ್ಕೆಚ್ ಮತ್ತು ಗೂಗಲ್ ಮ್ಯಾಪ್, ಕೆರೆ ಬೌಂಡರಿಯಿಂದ ಇರುವ ದೂರ ಈ ಎಲ್ಲಾ ವಿವರಗಳನ್ನು ಕ್ರೋಢೀಕರಿಸಿಕೊಂಡು ನಿಯಮಾನುಸಾರ ನಕ್ಷೆ ಮಂಜೂರಾತಿ ನೀಡುವುದಾಗಿ ತಿಳಿಸಿದರು.

ತದನಂತರ ಸದಸ್ಯರಾದ ಶ್ರೀ ಎಂ.ಗೌತಮ್ ಕುಮಾರ್ ರವರು ಮಾತನಾಡುತ್ತಾ ನಗರ ಯೋಜನಾ ವಿಭಾಗದ ಕರ್ತವ್ಯ ಹಾಗೂ ಜವಾಬ್ದಾರಿಗಳ ಸಂಪೂರ್ಣ ಮಾಹಿತಿಯನ್ನು ಸಭೆಗೆ ನೀಡಲು ಸೂಚಿಸಿದಾಗ, ಹಾಜರಿದ್ದ ನಗರ ಯೋಜನೆ ವಿಭಾಗದ ಅಧಿಕಾರಿಗಳು ಸಮರ್ಪಕವಾದ ಮಾಹಿತಿ ನೀಡುವಲ್ಲಿ ವಿಫಲರಾಗಿರುತ್ತಾರೆ. ಮುಂದುವರಿದು ಕಳೆದ ಐದು ವರ್ಷಗಳಲ್ಲಿ ಕೇಂದ್ರ ನಗರ ಯೋಜನೆ ವಿಭಾಗದಿಂದ ಎಷ್ಟು ಓ.ಸಿ ಮತ್ತು ಸಿ.ಸಿಗಳನ್ನು ವಿತರಿಸಲಾಗಿದೆ, ಉತ್ತರ ಮತ್ತು ದಕ್ಷಿಣ ಎರಡೂ ವಿಭಾಗಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದರು.

ನಂತರ ಅಭಿವೃದ್ಧಿ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ಯಾವ ಕ್ರಮವನ್ನು ಕೈಗೊಳ್ಳಲಾಗುತ್ತಿದೆ ಎಂಬುದರ ಮಾಹಿತಿ ನೀಡಲು ಕೇಳಿದಾಗ, ಅಪರ ನಿರ್ದೇಶಕರವರು ನಗರ ಯೋಜನೆ ಕಛೇರಿಯಲ್ಲಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಳ್ಳುವುದಿಲ್ಲವೆಂದು, ಸಂಬಂಧಪಟ್ಟ ವಲಯ ಸಹ ಕಂದಾಯ ಅಧಿಕಾರಿಗಳ ಕಛೇರಿಯಿಂದ ಕಟ್ಟಡದ ಮಾಲೀಕರು ಅಭಿವೃದ್ಧಿ ಶುಲ್ಕ ಪಾವತಿಸಿರುವ ವಿವರಗಳನ್ನು ಪಡೆದು, ಉಳಿದಂತೆ ಪ್ರಮಾಣ ಪತ್ರಗಳನ್ನು ಪಡೆದು ನಕ್ಷೆ ಮಂಜೂರಾತಿಯನ್ನು ನೀಡುತ್ತಿರುವುದಾಗಿ ಮಾಹಿತಿ ನೀಡಿದರು.

ಸಮಿತಿಯು ಕೋರಿರುವ ಮೇಲ್ಕಂಡ ಎಲ್ಲಾ ಮಾಹಿತಿಗಳ ಅಂಕಿಅಂಶಗಳನ್ನು 03 ದಿನಗಳೊಳಗೆ ಸಲ್ಲಿಸಲು ಶ್ರೀ ಎಂ.ಗೌತಮ್ ಕುಮಾರ್ ಸದಸ್ಯರು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಎಲ್ಲಾ ಮಾಹಿತಿಗಳನ್ನು ಒಂದು ವಾರದ ಒಳಗೆ ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಅಧಿಕಾರಿ/ಸಿಬ್ಬಂದಿಗಳು ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಅಸಡ್ಡೆ ಮನೋಭಾವವನ್ನು ತೋರದೆ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕೆಂದು, ಸಮಿತಿಯು ತಮ್ಮ ಕಛೇರಿಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ರೀತಿಯ ಲೋಪ ದೋಷಗಳು ಇಲ್ಲದಂತೆ ಎಲ್ಲಾ ಕಡತಗಳನ್ನು ನಿರ್ವಹಿಸಿರಲು ಸೂಚಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**
**ಲೆಕ್ಕಪತ್ರ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಅಪರ ನಿರ್ದೇಶಕರು, ನಗರ ಯೋಜನೆ, ಕೇಂದ್ರ ರವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ
6.ಜಂಟಿ ನಿರ್ದೇಶಕರು, ನಗರ ಯೋಜನೆ–ಉತ್ತರ ಮತ್ತು ದಕ್ಷಿಣ ರವರಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ
7.ಕಛೇರಿ ಕಡತಕ್ಕೆ